International Journal of Kannada Research 2017; 3(3): 115-121

International Journal of Kannada Research
www.kannadajournal.com

**ISSN: 2454–5813**
IJSR 2017; 3(3): 115-121
© 2017 IJKS
www.kannadajournal.com
Received: 04-06-2017
Accepted: 10-07-2017

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

**Correspondence**
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಗರತಿಯ ಹಾಡು ಕನ್ನಡದ ಪ್ರಾತಿನಿಧಿಕ ಜನಪದ ತ್ರಿಪದಿ ಸಂಕಲನ

**ಡಾ. ಕೆ ಶಿವಾನಂದಯ್ಯ**

**ಪೀಠಿಕೆ**
‘ಗರತಿಯ ಹಾಡು’ ಕನ್ನಡದ ಪ್ರಸಿದ್ಧ ಜನಪದ ತ್ರಿಪದಿಗಳ ಸಂಗ್ರಹ. ಹಲಸಂಗಿಯ ಸಹೋದರರಾದ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು ಇದರ ಸಂಗ್ರಾಹಕರು. ಈ ಸಂಗ್ರಹಕ್ಕೆ ಬಿ.ಎಂ.ಶ್ರೀಕಂಠಯ್ಯ, ದ.ರಾ.ಬೇಂದ್ರೆ, ಮಾಸ್ತಿ, ಸಿಂಪಿಲಿಂಗಣ್ಣ ಇವರ ಅಭ್ಯಾಸಯೋಗ್ಯ ವಿಮರ್ಶಾತ್ಮಕ ಲೇಖನಗಳೊಡನೆ ಪ್ರಕಟವಾಗಿದೆ. ಜನಪದ ತ್ರಿಪದಿಗಳನ್ನು ಸ್ತುತಿ, ತವರುಮನೆ- ತಾಯ್ತಂದೆ, ಅಣ್ತಮ್ಮರು-ಅಕ್ಕತಂಗಿಯರೂ, ಗೆಳತಿ, ಅತ್ತೆ ಮನೆ ಕಷ್ಟ, ಮನಸ್ತಾಪ, ಸತಿ-ಪತಿ, ಬಸುರೆ-ಬಾಣಂತಿ, ಲಾಲಿ, ಮಗ-ಮಗಳು-ಸೊಸೆ, ಹರಕೆ, ಬಂಜೆ, ವೈಧವ್ಯ, ಹಾಸ್ಯ, ನೀತಿ - ಮುಂತಾಗಿ ಇಪ್ಪತ್ತೂರು ಬಗೆಯಲ್ಲಿ ವಸ್ತುವನ್ನು ವಿಭಜಿಸಿಕೊಂಡು ಸಂಗ್ರಹಿತ ಏಳುನೂರ ಇಪ್ಪತ್ತೂರು ಜನಪದ ತ್ರಿಪದಿಗಳನ್ನು ಸಂಕಲಿಸಲಾಗಿದೆ.

ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯೇ ಬೀದಿವರೆಯೆ ಬೀರನ ಕತೆಯೆ?

-ಎಂದು ಮಧುರ ಕವಿ ಜನಪದ ಸಾಹಿತ್ಯವನ್ನು ಹಾಸ್ಯ ಮಾಡಿರುವುದನ್ನು ವಿರೋಧಿಸುವಂತವರು ಹೇಳುವುದೇನೆಂದರೆ ಮೊದಲು ಹುಟ್ಟಿದ್ದೇ ಜನವಾಣಿ. ಅದು ಬೆಳೆದು ಪರಿಷ್ಕೃತವಾಗಿ ವೃದ್ಧಿಯಾಗಿ ಕವಿವಾಣಿಯಾಯಿತು ಎನ್ನುತ್ತಾರೆ. ‘ಜನವಾಣಿ ಬೇರು; ಕವಿವಾಣಿ ಹೂ’, ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್’ ಎಂಬ ಕವಿರಾಜಮಾರ್ಗಕಾರರ ಮಾತನ್ನು ನೆನಪಿಸಿಕೊಳ್ಳಬಹುದು.

ಜನಸಾಮಾನ್ಯರು ಶಾಸ್ತ್ರ ಕಾವ್ಯಗಳ ಪರಿಚಯವಿಲ್ಲದವರು ಹಾಡಿನ ಮಟ್ಟನ್ನು ಅಂದರೆ ಛಂದಸ್ಸನ್ನು ಬಲ್ಲರು. ಹಳ್ಳಿಗಳಲ್ಲಿ ಹೊಲಕಣದಲ್ಲಿ, ಹಬ್ಬ ಹುಣ್ಣಿಮೆಗಳಲ್ಲಿ, ಸುಖದುಃಖ ಸಂದರ್ಭದಲ್ಲಿ ಜನರು ಸೇರಿ ತಮ್ಮ ರಸಭಾವಗಳನ್ನು ಹಾಡಿಕೊಂಡು ಕುಣಿಯುತ್ತಿದ್ದರು. ಕುಣಿತದ ಹೆಜ್ಜೆಗಳೇ ತಾಳ; ಹಾಡಿನ ಅಭಿನಯವೇ ಕುಣಿತ. ಬೇಟೆ, ಮದುವೆ, ಸಾವು, ಕಾಳಗದ ಸೋಲು-ಗೆಲುವುಗಳು, ಬಾಳ್ವೆಯ ಕಷ್ಟಸುಖ, ದೈವಾನುಭವ- ದೈವಭಕ್ತಿ, ಕೌಟುಂಬಿಕ ಜೀವನ, ಸಂಬಂಧಗಳು ಮೊದಲಾದ ವಿಷಯಗಳನ್ನು ಕುಣಿಯುತ್ತ, ಹಾಡು ಕಟ್ಟುತ್ತಿದ್ದರು. ಹೆಂಗಸರು, ಕೆಲಸಗಾರರು ಕೆಲಸದ ಬಳಲಿಕೆಯನ್ನು ಈ ಹಾಡಿನ ರಾಗದಲ್ಲಿ, ಗೀತೆಯ ಆನಂದದಲ್ಲಿ ಮರೆಯುತ್ತಿದ್ದರು. ಕುಟ್ಟುವಾಗ, ಬೀಸುವಾಗ, ಮಗುವನ್ನು ತೂಗುವಾಗ, ಮದುವೆಯಲ್ಲಿ ಸಲಿಯುವಾಗ, ಸಾವಿನಲ್ಲಿ ಅಳುವಾಗ, ಭಾರವನ್ನೆತ್ತುವಾಗ, ಬಂಡಿ ಹೊಡೆಯುವಾಗ, ದೋಣಿ ನಡೆಸುವಾಗ, ಕಾಳಗದ ಸಾಧನೆಗಳನ್ನು ಅಭ್ಯಾಸ ಮಾಡುವಾಗ ಹೆಂಗಸರು ಗಂಡಸರು ಈ ಹಾಡುಗಳನ್ನು ಹೇಳುತ್ತಿದ್ದರು. ಈ ತ್ರಿಪದಿಗಳ ಛಂದಸ್ಸು ಬಹು ಸಹಜ, ಸರಳ; ಭಾಷೆಯೂ ಸಹಜ, ಸರಳ; ಆಡುವ ಮಾತು, ಹಾಡುವ ಮಟ್ಟು. ಆದರೂ ಜನರ ಹೃದಯದಿಂದ ಸಂತೋಷದ ಅಥವಾ ದುಃಖದ ಸಮಯದಲ್ಲಿ ನೇರವಾಗಿ ಉಕ್ಕಿಬಂದ ಕಾರಣದಿಂದ ಇವುಗಳಲ್ಲಿ ಒಂದು ಸೊಗಸೂ, ಒಂದು ಕಾಂತಿಯೂ, ಒಂದು ರಮಣೀಯತೆಯೂ ಮೆರೆಯುವುವು.

'ಗರತಿಯ ಹಾಡು' ಸಂಕಲನದಲ್ಲಿ ಸ್ತ್ರೀ ಸಂವೇದನೆಯು ಅನನ್ಯ ಎಂಬಂತೆ ನಿರೂಪಿತವಾಗಿದೆ. ದ.ರಾ.ಬೇಂದ್ರೆಯವರು ಈ ಸಂಕಲನ ಕುರಿತು ಹೀಗೆ ಹೇಳುತ್ತಾರೆ: "ಗರತಿಯ ಹಾಡಿನ ಋಷಿಗಳು ಹೆಣ್ಣುಮಕ್ಕಳು- ನಮ್ಮ ತಾಯಿ ತಂಗಿಯರು, ಅಮ್ಮ ಅಕ್ಕಂದಿರು, ಮಡದಿ ಮಕ್ಕಳು. ಹಾಗೆ ವಿಚಾರಿಸಿ ನೋಡಿದರೆ ಅವರದೇ ನಿಜವಾದ ಕಾವ್ಯ. ಉಳಿದುದು ಕಾವ್ಯದ ಛಾಯೆ" ಎಂಬುದು ಗರತಿಯ ಹಾಡು ಸಂಕಲನದ ಮಹತ್ವವನ್ನು ಸಾರುತ್ತದೆ.

"ಗರತಿಯ ಹಾಡು ನಮ್ಮ ಸ್ತ್ರೀ ಜೀವನದ ಒಳಗನ್ನಡಿ; ಅದು ನಮ್ಮ ಹೆಣ್ಣು ಮಕ್ಕಳ ಹೃದಯದ ಪಡಿಗನ್ನಡಿ. ಅದರಲ್ಲಿ ಮಮತೆಯ ಮಾಧುರ್ಯವು ಮೈವೆತ್ತಿದೆ; ಪ್ರೇಮದ ಸತ್ವವು ಅಳವಟ್ಟಿದೆ. ಅದರಲ್ಲೂ ಹೆಣ್ಣಿನ ತ್ಯಾಗ ಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ. ಸುಖದ ಸೆಲೆಯಾಗಿದೆ" ಎಂಬ ಸಿಂಪಿ ಲಿಂಗಣ್ಣ ಅವರ ಮಾತುಗಳು ಕೃತಿಯಲ್ಲಿನ ಸ್ತ್ರೀ ಸಂವೇದನೆಯ ಸ್ವರೂಪವನ್ನು ಬಣ್ಣಿಸುತ್ತದೆ.

**ಸ್ತುತಿಪದ್ಯಗಳು**

ಸ್ತುತಿ ಪದ್ಯಗಳು ಜನಪದ ಗೀತ ಸಂಕಲನದ ಪ್ರಮುಖ ಭಾಗಗಳಲ್ಲಿ ಒಂದು. ಜನನದಿಂದ ಮುಪ್ಪಿನವರೆಗೂ ಎತ್ತಿ ಹಿಡಿದು ಅಜ್ಞಾನ- ಅವಗುಣಗಳನ್ನು ಲೆಕ್ಕಿಸದೆ ಸಲಹುತ್ತ ಬಂದ ಭೂಮಿತಾಯಿ, ತನ್ನನ್ನು ರಕ್ಷಿಸಿ ಕಾಪಾಡಿದ ದೈವಶಕ್ತಿಯನ್ನು ಸದಾ ಸ್ಮರಿಸುವಲ್ಲಿ ದೈವಭಕ್ತಿಯನ್ನು ಕಂಡುಂಡು ಸಾರಿದ್ದಾನೆ. ಮಂದೇನು ಕೊಟ್ಟೇತ ಮನವೇನು ದಣಿದೀತ/ ಮುಂಜಾನಾದಾನ ಗಿರಿಮಲ್ಲ ಕೊಟ್ಟರ/ ಮನಿತುಂಬಿ ನಮ್ಮ ಮನ ತುಂಬಿ// ಎನ್ನುವಲ್ಲಿಯೂ.. ಶಿವ ಶಿವನೆಂದರೆ ಸಿಡಿಲೆಲ್ಲ ಬಯಲಾಗಿ/ ಕಲ್ಲು ಬಂದೆರಗಿ ಎಲೆ ಮನವೆ/ ಶಿವನೆಂಬ ಶಬುದ ಬಿಡಬೇಡ// ಎನ್ನುವಲ್ಲಿಯೂ ದೈವಭಕ್ತಿಯಲ್ಲಿರುವ ದೃಢವಾದ ಶ್ರದ್ಧೆಯನ್ನು ಕಾಣಬಹುದು. ದೈವಭಕ್ತಿಯ ತೆನೆಯಾಗಿ ನಿಂತ ಶರಣರು, ದಾಸರು, ಸ್ಥಳೀಯ ದೈವ, ಪುರಾಣಗಳಲ್ಲಿ ಚಿತ್ರಿತವಾದ ಕೃಷ್ಣ, ನಾರಾಯಣ, ಶಿವ, ಹನುಮಂತ ಮೊದಲಾದ ದೈವ ಬಣ್ಣನೆಯ ಸೊಗಸಾದ ಚಿತ್ರಣ ಇಲ್ಲಿನ ತ್ರಿಪದಿಗಳಲ್ಲಿದೆ. ದೈವದ ಅಸ್ತಿತ್ವದಲ್ಲಿ ಬಲವಾದ ನಂಬಿಕೆ ಇರುವ ಹಳ್ಳಿಯ ಜನರು ಅಪಾರವಾದ ದೇವರ ಪದಗಳನ್ನು ಕಟ್ಟಿ ಹಾಡಿದ್ದಾರೆ. ಬದುಕಿನಲ್ಲಿ ಕಷ್ಟ ಬಂದಾಗ ತಮ್ಮ ಎಲ್ಲ ಭಾರವನ್ನು ದೇವರ ಮೇಲೆ ಹಾಕಿ ನಿಶ್ಚಿಂತರಾಗಿರುವುದು ಅವರ ಸಾಮಾನ್ಯ ಗುಣವಾಗಿದೆ. ಅವರ ದೈವಭಕ್ತಿಯಲ್ಲಿರುವ ಶ್ರದ್ಧೆ ತೀವ್ರತರವಾದುದು. ಜನಪದರು ಭೂಮಿ, ನೀರು, ಆಕಾಶ, ಗಾಳಿ, ಬೆಳೆ, ಹುಟ್ಟು-ಸಾವು ಮೊದಲಾದುವುಗಳೆಲ್ಲಾ ದೇವರ ಅಧೀನ ಎಂದು ನಂಬಿದ್ದಾರೆ. ಶರಣರು -ಸಾಧು ಸತ್ಪುರುಷರ ಪವಾಡಗಳನ್ನು ಕಂಡು ಕೇಳಿದ ಜನಪದರು ಅವರ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.

ಶರಣರ ನೆನೆದರ ಸರಗೀಯ ಇಟ್ಟಂಗ
ಹವಳ ಮಲ್ಲಿಗಿ ಮುಡಿದಂಗ/ ಕಲ್ಯಾಣ
ಶರಣರ ನೆನೆಯೊ ನನ ಮನವೆ//

ಅವರನ್ನು ನೆನೆಯುವುದು ಪುಣ್ಯ ಎಂಬುದನ್ನು ಸೊಗಸಾಗಿ ಹಾಡಿದ್ದಾರೆ. ಅಂತೆಯೇ
ಕರುಣ ಬಂದರ ಕಾಯೊ ಮರಣ ಬಂದರ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ/ ಕಾಸಿಲಿಂಗ
ಕಡೆತನಕ ಕಾಯೊ ಅಭಿಮಾನ - ಎಂದು ಬಸವಣ್ಣನ ಬಗೆಗೆ ಹೊಂದಿದ್ದ ಭಕ್ತಿಭಾವವನ್ನು ಹಾಡಿದ್ದಾರೆ.
ಕೂಡಲ ಸಂಗಯ್ಯ/ ಹೊಳೆಯಾಗ ಹ್ಯಾಂಗಿದ್ದಿ
ಹಳ್ಳೊತ್ತಿ ಸಣ್ಣ ಮಳಲೊತ್ತಿ/ ಗಂಗೀಯ/
ನೀರ್ಯೊತ್ತಿ ಲಿಂಗ ನೆನದಾನ
ಎಂಬಲ್ಲಿ ಮುಗ್ಧ ಭಕ್ತಿಯ ಸ್ವರೂಪವನ್ನು ಕಾಣಬಹುದು.

ಕೃಷಿ ಕಾಯಕವನ್ನು ಹೆಚ್ಚಾಗಿ ಅವಲಂಬಿಸಿದ್ದ ಜನಪದರು ಮನೆದೇವರು, ಕುಲದೇವರು, ಗ್ರಾಮದೇವರುಗಳ ಜೊತೆಗೆ ಪಂಚಭೂತಗಳನ್ನು ದೇವರೆಂದು ನಂಬಿದವರು. ಕೃಷಿ ಪರಿಕರಗಳು ಮತ್ತು ವ್ಯವಸಾಯಕ್ಕೆ ಜೊತೆಯಾಗಿದ್ದ ಎತ್ತುಗಳನ್ನು ಬಸವಣ್ಣನೆಂದು ಪೂಜಿಸುವುದನ್ನು ಕಾಣಬಹುದು;

ತುಂಬಿದ ಹೊಳಿಯಾಗ ಕೊಂಬು ಕಾಣಿಸತಾವ/
ಇಂಬುಳ್ಳ ಇಣಿಯಾ ಬಸವಣ್ಣ/ ಬರುವಾಗ
ಗಂಗೆದ್ದು ಕೈಯ ಮುಗಿದಾಳ//

ಎಂಬಲ್ಲಿ ಹೊಳೆಯನ್ನು ದಾಟಿ ಬರುವ ಬಸವಣ್ಣನಿಗೆ ಸ್ವತಃ ಗಂಗೆಯೇ ಎದ್ದು ಕೈಮುಗಿಯುತ್ತಾಳೆ ಎಂಬ ಕಲ್ಪನೆ ವಿನೂತವಾದುದು.
ಜನಪದರ ಸ್ತುತಿ ಪದ್ಯಗಳಲ್ಲಿ ವಿದ್ಯೆಯ ಅಧಿದೇವತೆಯಾದ ಸರಸ್ವತಿಯನ್ನು ಪ್ರಾರ್ಥಿಸುವುದು ಮತ್ತೊಂದು ಬಗೆಯದು. ಸರಸ್ವತಿ ನನಗೆ ಹಾಡನ್ನು ಕಲಿಸು ಎಂದು ಕೋರುವ ಪದ್ಯಗಳನ್ನು ಕಾಣಬಹುದು.
ತಾಯಿ ಸರಸತಿ ಬಾಗಿಲಲಿ ಯಾಕೆ ನಿಂದೆ
ತೋರೇನು ಬಾರೆ ನಿನಗಿಂಬ/ನಮ್ಮನೆ
ಸಾಲು ಮಂಚಾದ್ಲೆ ಒರಗಮ್ಮ

ಎಂದು ಕೋರುವುದರ ಜೊತೆಗೆ ನಾಲಗೆ ತೊಡರು, ಗಂಟಲು ತೊಡರನ್ನು ಬಿಡಿಸಿ ಸರಾಗ, ಸುರಾಗದಿಂದ ಹಾಡಿಸು ತಾಯಿ ಎಂದು ಕೋರುತ್ತಾರೆ.
ಆರೆಲೆಮಾವಿನ ಬೇರಾಗೆ ಇರುವೋಳೆ/ ವಾಲಗದ ಸದ್ದಿಗೆ ಒದಗೋಳೆ/ ಸರಸತಿಯೆ / ನಾಲಗೆ ತೊಡರ ಬಿಡಿಸಮ್ಮ
ಹೀಗೆ ಜನಪದರ ಮುಗ್ಧಭಕ್ತಿಯನ್ನು ಗರತಿಯ ಹಾಡು ಸಂಕಲನದಲ್ಲಿನ ಗೀತೆಗಳಲ್ಲಿ ಕಾಣಬಹುದು.

**ಕೌಟುಂಬಿಕ ಸಂಬಂಧಗಳ ಚಿತ್ರಣ**

'ಗರತಿಯ ಹಾಡು' ಸಂಕಲನದಲ್ಲಿನ ಮತ್ತೊಂದು ವೈಶಿಷ್ಟ್ಯವೆಂದರೆ ಕೌಟುಂಬಿಕ ಸಂಬಂಧಗಳನ್ನು ಕುರಿತ ಆಪ್ತ ಚಿತ್ರಣ. ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿ-ಮಕ್ಕಳು, ಅತ್ತೆ-ಸೊಸೆ, ಅತ್ತಿಗೆ-ನಾದಿನಿ, ಸತಿ-ಪತಿ ಮೊದಲಾದ ಸಂದರ್ಭಗಳಲ್ಲಿ "ಹೆಣ್ಣಿನ ಮಮತೆಯ ಮಾಧುರ್ಯವು ಮೈವೆತ್ತಿದೆ; ಪ್ರೇಮದ ಸತ್ವವು ಅಳವಟ್ಟಿದೆ. ಅದರಲ್ಲಿ ಹೆಣ್ಣಿನ ತ್ಯಾಗ ಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ; ಸುಖದ ಸೆಲೆಯಾಗಿದೆ". ಎಂಬ ಸಿಂಪಿ ಲಿಂಗಣ್ಣ ಅವರ ಮಾತುಗಳು ಗಮನಾರ್ಹ. ಕೌಟುಂಬಿಕ ಸಂಬಂಧಗಳನ್ನು ಬಲಗೊಳಿಸುವ ಏಕೈಕ ಸಾಧನವೇ ತ್ಯಾಗ. ಮನೆ ಮತ್ತು ಮನದ ದುಃಖ ನಿವಾರಣೆಗೆ ಭಾರತೀಯರು ಕಂಡುಕೊಂಡಿರುವ ಬಹುದೊಡ್ಡ ತಿಳಿವಳಿಕೆ ಇದಾಗಿದೆ. ಇನ್ನು ಹೆಣ್ಣನ್ನು ಕೇವಲ ದೇವತೆಯಾಗಿ ಪೂಜಿಸುವುದಷ್ಟಕ್ಕೇ ಸೀಮಿತವಾಗಿಲ್ಲ. ಇಲ್ಲಿನ ತ್ರಿಪದಿಗಳನ್ನು ಅವಲೋಕಿಸಿದಾಗ ಆಕೆ ತ್ಯಾಗದ ಪುತ್ಥಳಿ, ಮಮತೆಯ ಮಡಿಲು, ಪತಿಗೆ ಅರ್ಧಾಂಗಿಯಾಗಿಯೂ, ಮಕ್ಕಳಿಗೆ ರಕ್ತ ಮಾಂಸಗಳನ್ನು ಧಾರೆ ಎರೆದವಳು. ಹುಟ್ಟಿದ ಮನೆಗೆ ಎರವಾಗಿ, ಕೊಟ್ಟ ಮನೆಗೆ ಹೆಸರಾಗುವವಳು.
ತವರುಮನೆ- ತಾಯ್ತಂದೆ ಎಂಬ ಭಾಗದಲ್ಲಿ ಐವತ್ತೇಳು ತ್ರಿಪದಿಗಳಿವೆ. ತಾಯಿಯ ವಾತ್ಸಲ್ಯ, ತಂದೆಯ ಮಮಕಾರ, ತಾಯಿ-ತಂದೆ ಇಲ್ಲದ ತವರುಮನೆ ಕುರಿತ ಪದ್ಯಗಳಲ್ಲಿ ಹೆಣ್ಣು ತನ್ನ ಮನದಾಳದ ಅನಿಸಿಕೆಗಳನ್ನು ದಾಖಲಿಸಿದ್ದಾಳೆ.

ತಾವರಿಯ ಗಿಡ ಹುಟ್ಟಿ ದೇವರಿಗೆ ನೆರಳಾದಿ/
ನಾ ಹುಟ್ಟಿ ಮನೆಗೆ ಎರವಾದೆ/ ಹಡದವ್ವ
ನೀ ಕೊಟ್ಟ ಮನೆಗೆ ಹೆಸರಾದೆ//

ಎಂಬಲ್ಲಿ ತಾನು ಹುಟ್ಟಿದ ಮನೆ ಮತ್ತು ಕೊಟ್ಟ ಮನೆಗಳೆರಡಕ್ಕೂ ಹೆಸರು ತರುವ ಕಷ್ಟವನ್ನು ಪ್ರೀತಿ, ಸಂತೋಷದಿಂದಲೇ ನಿಭಾಯಿಸಿದ್ದಾಳೆ.

ತಂದೀಯ ನೆನದರ ತಂಗಳ ಬಿಸಿಯಾಯ್ತು/
ಗಂಗಾದೇವಿ ನನ್ನ ಹಡೆದವ್ವ/ ನೆನೆದರ/
ಮಾಸಿದ ತಲೆಯು ಮಡಿಯಾಯ್ತು//

-ಎಂಬಲ್ಲಿ ತಂದೆ-ತಾಯಿಯ ನೆನಪಿನ ಸುಂದರ ಚಿತ್ರಣವಿದೆ.

ಹಾಲುಂಡ ತವರೀಗಿ ಏನೆಂದು ಹಾಡಲೆ/
ಹೊಳೆದಂಡಿಲಿರುವ ಕರಕೀಯ/ ಕುಡಿಯಂಗ/
ಹಬ್ಬಲೆ ಅವರ ರಸಬಳ್ಳಿ//

ತಾನು ಹುಟ್ಟಿ ಬೆಳೆದ ತವರುಮನೆಯ ವಂಶದ ಬಳ್ಳಿ ಸದಾ ಬೆಳೆಯಲಿ ಎಂಬ ಮನಃಪೂರ್ವಕ ಹಾರೈಕೆ ಇಡೀ ಕನ್ನಡ ಜನಪದ ತ್ರಿಪದಿಗಳಲ್ಲೇ ಅತ್ಯಂತ ಶ್ರೇಷ್ಠ ರಚನೆ ಎನಿಸಿದೆ.
ತಾಯಿ ಇಲ್ಲದ ತವರು ಮನೆಯ ಭೇಟಿ ಆಕೆ ಬಾಳಿನ ಅತ್ಯಂತ ಅಸಹನೀಯವೂ, ನೋವಿನದ್ದೂ ಆಗಿದೆ. ಅವರಳ ಮನದ ನೋವಿನ ಚಿತ್ರಣ ಇಲ್ಲಿನ ಹತ್ತು ಹಲವು ತ್ರಿಪದಿಗಳಲ್ಲಿ ಚಿತ್ರಿತವಾಗಿದೆ.

ಕಡಗ ಇಲ್ಲದ ಕೈಯ ಕರುಣ ಇಲ್ಲದ ಪುರುಷ/
ಹಡೆದವ್ವನಿಲ್ಲದ ತವರೀಗಿ/ ಹೋದಾರ/
ಅಡವ್ಯಾಗ ವಸ್ತಿ ಇಳಿದಾಂಗ//
ತಾಯಿಲ್ದ ತವರೀಗಿ ಹೋಗದಿರು ನನ ಮನವ/
ನೀರಿಲ್ದ ಕೆರಿಗೆ ಕರ ಬಂದು/ ತಿರುಗಾಗ/
ಆಗ ನೋಡಿದರ ದುಃಖಗಳ

ಈ ಮೇಲಿನ ಎರಡು ತ್ರಿಪದಿಗಳಲ್ಲಿ ತಾಯಿ ಇಲ್ಲದ ತವರು ಮನೆಗೆ ಬಂದು ಹೆಣ್ಣಿನ ಸ್ಥಿತಿಯನ್ನು ಕಾಡಿನಲ್ಲಿನ ವಸತಿ ಹಾಗು ನೀರಿಲ್ಲದ ಕೆರೆಗೆ ಬಾಯಾರಿದ ಕರುವೊಂದು ನೀರಿಲ್ಲದ ಕೆರೆಗೆ ಬಂದಂತೆ ಎಂಬ ಅದ್ಭುತ ಉಪಮೆಗಳ ಮೂಲಕ ಚಿತ್ರಿಸಲಾಗಿದೆ.

ತೊಟ್ಟಿಲ ಹೊತ್ಕೊಂಡು ತವರು ಬಣ್ಣ ಉಟ್ಕೊಂಡು/
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು/ ತೌರೂರ
ತಿಟ್ಟತ್ತಿ ನಿಂದು ನೋಡ್ಯಾಳೋ//

ಮೊದಲ ಮಗುವಿನ ಬಾಣಂತನ ಮುಗಿಸಿ ತವರು ಮನೆಯಿಂದ ಗಂಡನ ಮನೆಗೆ ತೆರಳುತ್ತಿರುವ ಹೆಣ್ಣಿನ ಚಿತ್ರಣ ಇಲ್ಲಿದೆ. ಕನ್ನಡ ಜನಪದ ತ್ರಿಪದಿ ಸಾಹಿತ್ಯದಲ್ಲಿ ಅತ್ಯಂತ ಶ್ರೇಷ್ಠ ರಚನೆಗಳಲ್ಲಿ ಒಂದೆಂದು ದಾಖಲಾಗಿದೆ. ಊರು-ಕೇರಿಯ ಜನರೆಲ್ಲಾ ಸೇರಿ ಬಂದು ಹೆಣ್ಣು ಮಗಳನ್ನು ಬೀಳ್ಕೊಡುವ ಭಾವುಕ ಸನ್ನಿವೇಶವನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ ಈ ತ್ರಿಪದಿ. ತೀ.ನಂ.ಶ್ರೀ ಅವರು ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅಲಂಕಾರಗಳನ್ನು ಪ್ರಸ್ತಾಪಿಸುವಾಗ ನಿರಾಭರಣ ಸೌಂದರ್ಯಕ್ಕೆ ಜನಪದ ತ್ರಿಪದಿಯನ್ನು ಉದಾಹರಿಸಿರುವುದನ್ನು ನೆನಪಿಸಿಕೊಳ್ಳಬಹುದು.
ಭಾರತೀಯ ಕೌಟುಂಬಿಕ ವ್ಯವಸ್ಥೆಯ ಬುನಾದಿ 'ಸ್ತ್ರೀ'. ಆಕೆಯ ನಿಷ್ಕಲ್ಮಷ, ನಿರ್ವಾಜ ಪ್ರೀತಿ, ತ್ಯಾಗ, ಸ್ನೇಹ ಗುಣಗಳಿಂದಾಗಿ ಇಡೀ ಕುಟುಂಬವನ್ನು ಪೊರೆಯುವವಳು, ಕಾಪಾಡುವವಳು. 'ಅಣ್ಣ-ತಮ್ಮ, ಅಕ್ಕ-ತಂಗಿಯರೂ, ಅತ್ತಿಗೆ-ನಾದಿನಿಯರೂ' - ಈಭಾಗದಲ್ಲಿ ಎಂಬತ್ತೈದು ತ್ರಿಪದಿಗಳಿವೆ. ಹೆಣ್ಣಿನ ಜನುಮಕ್ಕೆ ಅಣ್ಣ-ತಮ್ಮರು ಯಾಕೆ ಬೇಕು ಎಂಬುದನ್ನು ಈ ಕೆಳಗಿನ ತ್ರಿಪದಿಯಲ್ಲಿ ಕಾಣಬಹುದು;

ಹೆಣ್ಣೀನ ಜನುಮಾಕ ಅಣ್ಣತಮ್ಮರು ಬೇಕು/
ಬೆನ್ನ ಕಟ್ಟುವರು ಸಭೆಯೊಳಗೆ/ ಸಾವೀರ/
ಹೊನ್ನ ಕಟ್ಟುವರು ಉಡಿಯೊಳಗ//

ಅಣ್ಣನ ಹೆಂಡತಿ ನಾದಿನಿಯನ್ನು ಕಾಣುವ ರೀತಿಯನ್ನು ಹೀಗೆ ಚಿತ್ರಿಸುತ್ತದೆ;

ಅಣ್ಣನ ಹೆಂಡತಿ ಕಣ್ಣೀಗಿ ಒಳ್ಳೆವಳು/
ಸುಣ್ಣದ ನೀರ ಒಲಿ ಮುಂದ/ ಇಟಗೊಂಡು/
ಎಮ್ಮಿ ಹಾಲೆಂದು ಬಡಸ್ಯಾಳ//

ಹೆಣ್ಣು ಮಗಳಿಗೆ ತನ್ನ ತಮ್ಮನೆಂದರೆ ಎಲ್ಲಿಲ್ಲದ ಪ್ರೀತಿ; ಅವನು ದೊರೆ ಸಮಾನ ಅವನನ್ನು ಪ್ರೀತಿಯಿಂದ ಸ್ವಾಗತಿಸುವ ಪರಿ ಹೀಗಿದೆ;

ಸರದಾರ ಬರುವಾಗ ಸುರಿದಾವ ಮಲ್ಲೀಗಿ/
ದೊರೆ ನನ್ನ ತಮ್ಮ ಬರುವಾಗ/ ಯಾಲಕ್ಕಿ/
ಗೊನಿ ಬಾಗಿ ಹಾಲ ಸುರಿದಾವ//

ಅಣ್ಣ-ತಂಗಿ ಸಂಬಂಧದ ಭಾವನಾತ್ಮಕ ಕ್ಷಣವನ್ನು ಜನಪದ ತ್ರಿಪದಿ ಹೀಗೆ ನೆನಪಿಸಿಕೊಡುತ್ತದೆ;

ತಂಗೀಗಿ ಕಳುವ್ಯಾನ ತೆವರೀರಿ ನಿಂತಾನ/
ಅಂಗೀಲಿ ನೀರು ವರಸ್ಯಾನ/ ನನ್ನಣ್ಣ/
ಇಂದೀಗಿ ತಂಗಿ ಎರವಂದಾ//

ತಂಗಿಯನ್ನು ಬಣ್ಣಿಸುವ ಬಗೆ ಹೀಗಿದೆ;

ಗಿಡ್ಡರು ನಡೆದರ ಗಿಣಿಹಿಂಡು ನಡೆಂದಗ
ಉದ್ದನ ಬಾಲಿ ನನ ತಂಗಿ/ ನಡೆದರ
ರುದ್ದರನ ತೇರ ಎಳೆಂದ//

ಅಣ್ಣನ ಮನವನ್ನು ಬಲ್ಲ ಸೋದರಿ; ಅವನ ಮನದಲ್ಲಿನ ಪ್ರೇಯಸಿಯನ್ನು ಕುರಿತ ರೂಪಕ ಹೀಗಿದೆ;

ತೋಟಕ ಹೋದಣ್ಣ ಊಟಕ್ಕ ಬರಲಿಲ್ಲ/
ತೋಟದ ಹೂವ ತೆಲಿ ತುಂಬ/ ಇಟಗೊಂಡು/
ಊಟದ್ದಂಬಲ ಮರೆತಾನ//

ಅಕ್ಕ-ತಮ್ಮರ ರೀತಿ ಅನನ್ಯವಾದುದು. ಅಕ್ಕನ ಮಗಳ ಮೇಲಿನ ವಾತ್ಸಲ್ಯಮಯ ಪ್ರೀತಿಯನ್ನು ಹೆಣ್ಣು ನೆನಪಿಸಿಕೊಂಡ ಪರಿ ನೋಡಿ;

ಅಕ್ಕನ ಕರಕೊಂಡು ಹಂಡೀಯ ಹೊಡಕೊಂಡು/
ಅಕ್ಕನ ಮಕ್ಕಳಿಗೆ ಬಿಸುಲೆಂದು/ ತಮ್ಮಯ್ಯ
ವಲ್ಲಿ ಮುಂಜೆರಗ ಹಿಡದನೆ//

'ಗರತಿಯ ಹಾಡು' ಸಂಕಲನದಲ್ಲಿನ ತ್ರಿಪದಿಗಳಲ್ಲಿ ಹೆಣ್ಣು ತನ್ನ ಗೋಳನ್ನು ತೋಡಿಕೊಂಡಿದ್ದಾಳೆ. 'ಅತ್ತೆಯ ಮನೆಯ ಕಷ್ಟ'- ಈ ಭಾಗದ ತ್ರಿಪದಿಗಳಲ್ಲಿ ಹೆಣ್ಣುಮಗಳು ಅತ್ತೆಯ ಮನೆಯ ಕಷ್ಟಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾಳೆ. ಈ ಭಾಗದಲ್ಲಿ ಒಟ್ಟು 20 ತ್ರಿಪದಿಗಳಿವೆ;
ಅತ್ತೆಯ ಮನೆಯ ದೈನಂದಿನ ಕೆಲಸದ ಒತ್ತಡ ತೀವ್ರವಾದಾಗ ನೋವನ್ನು ವ್ಯಕ್ತಪಡಿಸಿದ ರೀತಿ ಹೀಗಿದೆ;

ಅತ್ತಿಯ ಮನಿಯಾಗ ಅರವತ್ತು ಗಂಗಾಳ
ಬೆಳಗತೇನತ್ತಿ ಬೈಬ್ಯಾಡ/ ತವರವರು/
ಸರುಮುತ್ತ ಮಾಡಿ ಸಲವ್ಯಾರ//

ಗಂಡನ ಮನೆಯಲ್ಲಿ ಹಲವರ ಜೊತೆ ಹೊಸ ಜೀವನ ನಡೆಸಬೇಕಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮನೆಯವರೆಲ್ಲರೂ ಟೀಕಿಸಲು ಹೊರಟಾಗ ನೋವು ಸಹಜವಾಗಿ ಬರುತ್ತದೆ. ಅದರಲ್ಲೂ ಗಂಡ ಬೈದರೆ ಏನೊಂದು ಕಣ್ಣೀರು ಬರುವುದಿಲ್ಲ. ಆದರೆ ಗಂಡನ ತಮ್ಮ ಮೈದುನ ಬೈದಾಗ ಮೋಡವಿಲ್ಲದೆ ಮಳೆ ಸುರಿದಂತೆ ದುಃಖ ಆವರಿಸುವ ಬಗೆಯನ್ನು ಸುಂದರವಾಗಿ ಹಾಡಿದ್ದಾಳೆ;

ಮಾರಾಯರು ಬೈದರ ಬಾರಾವು ಕಣ್ಣೀರು/
ಮಾರಾಯರ ತಮ್ಮ ಮೈದೂನ / ಬೈದರ/
ಮಾಡಿಲ್ಲದ ಮಳೆಯು ಸುರಿದಂಗ//

ಗಂಡಹೆಂಡತಿ ನಡುವೆ ಹೊಂದಾಣಿಕೆ, ಪರಸ್ಪರ ಗೌರವ, ಪ್ರೀತಿ, ನಂಬಿಕೆಗಳು ಅಗತ್ಯ. ಆದರೆ ಗಂಡನೇ ಹೆಂಡತಿಯನ್ನು ಹಲವು ಬಗೆಯಲ್ಲಿ ಹಿಂಸಿಸಿದ ನಿದರ್ಶನವನ್ನು ಈ ಕೆಳಗಿನ ತ್ರಿಪದಿಗಳಲ್ಲಿ ಕಾಣಬಹುದು;

ಸೇರದ ಗಂಡಯ್ನ ಏನೆಂದು ಕರೆಯಲೊ/
ಬಾರೋ ಗಂಡಯ್ಯ ಮಲಗೋಣ/ ಮಂಚದ್ಮೇಲೆ/
ತಾಳೆಹೂವಿನ ತಲೆದಿಂಬು//
ಉಂಡರುಟ್ಟರು ಸೇರ, ಮಂಡೆ ಬಾಚರು ಸೇರ/
ಗಂಡನಲ್ಲ ಕಾಣೋ ದುಸ್ಮಾನ/ ಹೊಟ್ಟೆಲಿ/
ಕೆಂಡದಂತೆ ಮೂಡೋ ರಘರಾಮ//

ಸತಿ-ಪತಿಗಳೊಂದಾದ ಭಕ್ತಿ ಹಿತಮಪ್ಪುದು ಶಿವಂಗೆ ಎಂಬಂತೆ ಇಲ್ಲಿನ ಅನೇಕ ಜನಪದ ತ್ರಿಪದಿಗಳಲ್ಲಿ ಗಂಡ-ಹೆಂಡತಿ ಅನ್ಯೋನ್ಯ ದಾಂಪತ್ಯ ಕುರಿತ ಪದ್ಯಗಳಿವೆ. 'ಸತಿ-ಪತಿ' ಎಂಬ ಭಾಗದಲ್ಲಿ ಐವತ್ತೊಂಬತ್ತು ತ್ರಿಪದಿಗಳಿವೆ;
ಗಂಡ-ಹೆಂಡತಿ ಪರಸ್ಪರ ಒಬ್ಬರನ್ನೊಬ್ಬರು ಬಿಟ್ಟಿರಲಾರದಂತಹ ಬಾಂಧವ್ಯ ಬೆಸೆದಿರುತ್ತದೆ. ಮದುವೆಯಾದ ಹೊಸದರಲ್ಲಿ ಹೆಂಡತಿ ತವರು ಮನೆಗೆ ಹೋದಾಗ ಗಂಡ ಹೇಳುವ ಈ ಕೆಳಗಿನ ಮಾತುಗಳು ಗಂಡ- ಹೆಂಡತಿ ನಡುವಿನ ಬಾಂಧ್ಯವ್ಯಕ್ಕೆ ಸಾಕ್ಷಿಯಾಗಿದೆ.

ಅಡಗೀಯ ಮನಿಯಾಗ ಮಡದೀಯ ಸುಳುವಿಲ್ಲ/
ಅಡಗಿ ಬಾಯೀಗಿ ರುಚಿಯಿಲ್ಲ/ ಹಡೆದವ್ವ/
ಮಡದಿ ತವರೀಗಿ ಹೋಗ್ಯಾಳ//

ಗಂಡ-ಹೆಂಡಿರ ನಡುವೆ ಮುನಿಸು, ಜಗಳ ಸಹಜ. ಆದರೆ ಆ ಜಗಳ ಹೇಗಿರಬೇಕೆಂದರೆ;

ಗಂಡಹೆಂಡರ ಜಗಳಾ ಗಂಧ ತೀಡೀಧಾಂಗ/
ನಿಂಗಕ ನೀರು ಎರೆದಾಂಗ/ ಹಿರಿಹೊಳೆಯ/
ಗಂಗವ್ವ ಸಾಗಿ ಹರಿದಂಗ//

ಹೆಂಡತಿ ಪದೆ ಪದೆ ತವರುಮನೆಯನ್ನು ನೆನಪು ಮಾಡಿಕೊಳ್ಳುತ್ತಾ, ಬೇಸರ ವ್ಯಕ್ತಪಡಿಸಿದಾಗ ಗಂಡ ಸಮಾಧಾನ ಪಡಿಸುವುದು ಮತ್ತು ಕೋಪದಿಂದ ಹೆಂಡತಿಗೆ ಬಡಿದಾಗ ಮನಸ್ಸಿನಲ್ಲಿ ಮರುಗುವ ಪರಿ ನೋಡಿ;

ಹಾಸೀಗಿ ಹಾಸೆಂದಾ ಮಲ್ಲೀಗಿ ಮುಡಿಯೆಂದಾ/
ಬ್ಯಾಸತ್ತರ ಮಡದಿ ಮಲಗೆಂದಾ/ ನನ ರಾಯಾ/
ತನ ನೋಡಿ ತವರ ಮರಿಯೆಂದಾ//
ಮಡದೀಯ ಬಡಿದಾನ ಮನದಾಗ ಮರಗ್ಯಾನ/
ಒಳಗ್ಹೋಗಿ ಸೆರಗ ಹಿಡಿಯೂತ/ ಕೇಳ್ಯಾನ/
ನಾ ಹೆಚ್ಚೊ ನಿನ್ನ ತವರೆಚ್ಚೊ//

ಗಂಡ ಮತ್ತೊಬ್ಬಳ ಸಂಗ ಮಾಡಿದ್ದಾನೆ ಎಂದು ಅರಿತ ಹೆಣ್ಣು ಅವನಿಗೆ ಬುದ್ಧಿ ಹೇಳಿ ಸರಿ ದಾರಿಗೆ ತರಲು ಪ್ರಯತ್ನಿಸುತ್ತಾಳೆ;

ಅಂಗೀಯ ಮ್ಯಾಲಂಗಿ ಛಂದೇನೊ ನನ ರಾಯ/
ರಂಬಿ ಮ್ಯಾಲ ರಂಬಿ ಪ್ರತಿ ರಂಬಿ/ ಬಂದರ
ಛಂದೇನೊ ರಾಯ ಮನಿಯಾಗ//

ಗಂಡ-ಹೆಂಡತಿ ನಡುವಿನ ಪ್ರೀತಿಗೆ ಬಡತನವಿಲ್ಲ; ಹೆಂಡತಿ ತನ್ನ ಗಂಡನನ್ನು ಅವನಿರುವ ಸ್ಥಿತಿಯಲ್ಲೇ ಒಪ್ಪಿಕೊಂಡಿದ್ದಾಳೆ. ಅವನು ಬಡವನಾದರೂ 'ಮನೆಯಲ್ಲಿನ ಬಂಗಾರದ ಮಾಲು' ಎಂದು ಕೊಂಡಾಡುವುದನ್ನು ಈ ತ್ರಿಪದಲ್ಲಿ ಕಾಣಬಹುದು;

ಕೂಲಿ ಮಾಡಿದರೇನ ಕೋರಿ ಹೊತ್ತರೇನ/
ನಮಗ ನಮ ರಾಯ ಬಡವೇನ/ ಬಂಗಾರ/
ಮಾಲ ಇದ್ದಾಂಗ ಮನಿಯಾಗ//

ಹೆಣ್ಣುಮಗಳು ಬಂಜೆ, ವಿಧವೆಯಾಗಿ ಅನುಭವಿಸಿದ ಕಷ್ಟಗಳು ಅನೇಕ; ಬಂಧುಬಳಗದವರ ನಿಂದನೆ, ಅವಮಾನಗಳಿಂದ ಬದುಕು ತತ್ತರಿದ್ದು ಉಂಟು; ಆ ನೋವಿನ ಪರಿಯನ್ನು ಈ ತ್ರಿಪದಿಗಳು ಕಟ್ಟಿಕೊಡುತ್ತವೆ.

ಬಾಲಕರಿಲ್ಲದ ಬಾಲಿದ್ಯಾತರ ಜನ್ಮ/
ಬಾಡೀಗಿ ಎತ್ತು ದುಡಿದಂಗ/ ಬಾಳೆಲೆಯ/
ಹಾಸ್ಯುಂಡು ಬೀಸಿ ಒಗೆದಂಗ//
ಮುಗ್ಗ ಜ್ವಾಳಧಂಗ ಕಗ್ಗ ಬೆಳಸಿನ ಹಂಗ/
ಹಗ್ಗಿಲ್ದ ಬಾವಿಕೊಡದ್ಹಾಂಗ/ ಪತಿರಾಯ
ನೀ ಹೋದ ಛಣಕ ನನ ಜೀವ//

ಒಟ್ಟಾರೆ ಕೌಟುಂಬಿಕ ಸಂಬಂಧಗಳ ವಿವಿಧ ಮುಖಗಳ ಅನಾವರಣವನ್ನು 'ಗರತಿಯ ಹಾಡು' ಸಂಕಲನದಲ್ಲಿನ ತ್ರಿಪದಿಗಳಲ್ಲಿ ಕಾಣಬಹುದು. ಆದುದರಿಂದ ಇಲ್ಲಿನ ಗೀತೆಗಳು ಹೆಣ್ಣಿನ ಹೃದಯಕ್ಕೆ ಹಿಡಿದ ಕನ್ನಡಿ, ಪಡಿಗನ್ನಡಿ ಎನ್ನಬಹುದು.

**ಆಕರ ಕೃತಿ**

1. ಗರತಿಯ ಹಾಡು
2. (ತ್ರಿಪದಿಗಳ ಸಂಗ್ರಃ)
3. ಸಂಗ್ರಾಹಕರು: ಹಲಸಂಗಿಯ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು
4. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
5. ಮರುಮುದ್ರಣ: 2002